ದಿನಾಂಕ: 10-08-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಆರೋಪಿತರ ಪರ ಶ್ರೀ.ಪಿ.ಎ.ಪಿ ವಕೀಲರಿಂದ ಶ್ರೀ.ಬಿ.ಜೆ.ಜಿ ವಕೀಲರ ಪರವಾಗಿ**

5. ನಮ್ಮ ಸ್ವಂತ ಊರು ನಿಪನಾಳ ಗ್ರಾಮ, ಆದರೆ ನಾವು ವಾಸ ಇರುವುದು ಹುಬ್ಬರವಾಡಿ ಗ್ರಾಮದಲ್ಲಿ. ನಿಪನಾಳ ಗ್ರಾಮದಲ್ಲಿ ನಮಗೆ ಪಿತ್ರಾರ್ಜಿತವಾದ ಹೊಲ, ಮನೆ ಇರುವುದಿಲ್ಲ. ನಮ್ಮದು ಅಲೆಮಾರಿ ಜೀವನ ಆಗಿರುವುದರಿಂದ, ನಮ್ಮ ಪೂರ್ವಜರ ಒಂದು ಕುಟುಂಬ ಮಾತ್ರ ನಿಪನಾಳ ಗ್ರಾಮದಲ್ಲಿದ್ದು, ಬೇರೆಯವರೆಲ್ಲರೂ ಬೇರೆ ಬೇರೆ ಊರುಗಳಲ್ಲಿ ವಾಸ ಇದ್ದೇವೆ. ಹುಬ್ಬರವಾಡಿ ಗ್ರಾಮದಲ್ಲಿ ನಮಗೆ ಸೇರಿದ ಸ್ವಂತ ಜಾಗ ಇರುವುದಿಲ್ಲ. ನಾವು ಮನೆ ಕಟ್ಟಲು ನಿರ್ಧರಿಸಿದ ಜಾಗ ಸರ್ಕಾರಿ ಜಾಗ ಎಂದರೆ ಸರಿ. ಸಾಕ್ಷಿ ಮುಂದುವರೆದು ಸರ್ಕಾರದವರು ನಮಗೆ ಮಂಜೂರು ಮಾಡಿದ್ದರು ಎಂದು ಹೇಳಿದ್ದಾರೆ.

6. ನಾವು ಪಂಚಾಯತಿಯವರಿಗೆ ಅರ್ಜಿ ಕೊಟ್ಟ ನಂತರವೇ ಸರ್ಕಾರದವರು ನಮಗೆ ಮನೆಯನ್ನು ಮಂಜೂರು ಮಾಡಿದ್ದರು. ಪಂಚಾಯತಿಯಲ್ಲಿ ಆ ಬಗ್ಗೆ ಠರಾವು ಆದ ಬಗ್ಗೆ ನನಗೆ ಗೊತ್ತಿರುವುದಿಲ್ಲ, ಆದರೆ ಉತಾರೆಯಲ್ಲಿ ನಮ್ಮ ಹೆಸರು ಬಂದಿರುತ್ತದೆ. ನಮ್ಮ ಮನೆಯ ನಂಬರ 1014 ಇರುತ್ತದೆ. ಸದರಿ ಮನೆ ನಂಬರ ಗೀತಾ ವಿಠ್ಠಲ ಪಾಟೀಲ ಅವರ ಹೆಸರಿನಲ್ಲಿದೆ ಎನ್ನುವುದಕ್ಕೆ ಸಾಕ್ಷಿ ಈ ಹಿಂದೆ ನಮ್ಮ ಹೆಸರಿನಲ್ಲಿತ್ತು, ಆರೋಪಿತರು ಗುಂಡಾವರ್ತಿಯಿಂದ ಯಾರ ಹೆಸರಿಗೆ ಬದಲಾಯಿಸಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ಹೇಳಿದ್ದಾರೆ. ಆ ಬಗ್ಗೆ ನನಗೆ ಈ ಹಿಂದೆ ತಿಳಿದಿತ್ತು ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಈಗ ನನಗೆ ನೀವು ಪ್ರಶ್ನೆ ಕೇಳಿದ ನಂತರ ಗೊತ್ತಾಗಿದೆ ಎಂದು ಹೇಳಿದ್ದಾರೆ.

7. 2014 ರಿಂದ ಇಲ್ಲಿಯವರೆಗೆ ನಿಮ್ಮ ಮನೆಯ ದಾಖಲೆಯನ್ನು ಪರಿಶೀಲಿಸಿದ್ದೀರಾ ಎನ್ನುವುದಕ್ಕೆ ಸಾಕ್ಷಿ ಹೌದು ಎಂದು ಉತ್ತರಿಸಿ ನಾನು ಕಂದಾಯ ಪಾವತಿಸಿದ ಬಗ್ಗೆ ಪುಸ್ತಕದಲ್ಲಿ ನಮೂದು ಇದೆ ಎಂದು ಹೇಳಿದ್ದಾರೆ. ಆ ದಾಖಲೆಯನ್ನು ಪೋಲಿಸರಿಗೆ ನೀಡಲು ನನಗೆ ತೊಂದರೆ ಇರಲಿಲ್ಲ ಎನ್ನುವುದು ಸರಿ.

8. ನಾವು ಅತಿಕ್ರಮವಾಗಿ ಗುಡಿಸಲು ಹಾಕಿಕೊಂಡಿದ್ದೇವೆ ಎಂದು ಅದನ್ನು ತೆರವುಗೊಳಿಸಬೇಕೆಂದು ಪಂಚಾಯತಿಯವರು ನಮಗೆ ನೋಟಿಸ ಕೊಟ್ಟಿದ್ದರು ಎನ್ನುವುದು ಸರಿಯಲ್ಲ. ಮನೆ ನಂಬರ 1014 ಈ ಹಿಂದೆ ಗೀತಾ ವಿಠ್ಠಲ ಪಾಟೀಲ ಎನ್ನುವವರಿಗೆ ಸೇರಿದ್ದು, ಆ ದಾಖಲೆಯನ್ನು ನಮ್ಮ ಹೆಸರಿಗೆ ನಾವು ಸೃಷ್ಟಿ ಮಾಡಿಕೊಂಡಿದ್ದೇವೆ ಎನ್ನುವುದು ಸರಿಯಲ್ಲ.

9. 3 ರಿಂದ 6 ನೇ ಆರೋಪಿತರ ಸಹೋದರಿಯ ಗುಡಿಸಲನ್ನು ನಾನು ಸುಟ್ಟು ಹಾಕಿದ್ದೇನೆ ಎಂದು ನನ್ನ ಮೇಲೆ ಕೇಸು ಕೊಡಲಾಗಿತ್ತು ಎನ್ನುವುದು ಸರಿಯಲ್ಲ. ಆ ಪ್ರಕರಣದಲ್ಲಿ ನಾವು ರಾಜಿ ಮಾಡಿಕೊಂಡು ಈಗ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

10. ನಮ್ಮ ಜಾಗ ಎಂದು ಹೇಳುವ ಜಾಗದ ವಿಚಾರವಾಗಿ ನನ್ನ ಮೇಲೆ 3-4 ಕೇಸುಗಳು ಇವೆ ಎನ್ನುವುದಕ್ಕೆ ಸಾಕ್ಷಿ ಆರೋಪಿತರು ಉದ್ದೇಶಪೂರ್ವಕವಾಗಿ ನನ್ನ ಮೇಲೆ ಕೇಸು ಕೊಡಿಸಿದ್ದಾರೆ ಎಂದು ಹೇಳಿದ್ದಾರೆ. ಆರೋಪಿತರು ನನ್ನ ವಿರುದ್ಧ ನೀಡಿದ ದೂರಿನಲ್ಲಿ ರಾಯಬಾಗ ಪೋಲಿಸರು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆ ಎನ್ನುವುದಕ್ಕೆ ಅದು ನನ್ನ ಗಮನದಲ್ಲಿ ಇಲ್ಲ ಎಂದು ಹೇಳಿದ್ದಾರೆ.

11. ನಾನು ಆ ಎಲ್ಲಾ ಪ್ರಕರಣಗಳಲ್ಲಿಯೂ ಬೇರೆ ಬೇರೆ ನ್ಯಾಯಾಲಯಗಳಲ್ಲಿ ವಿಚಾರಣೆಗೆ ಹಾಜರಾಗುತ್ತಿದ್ದರೂ ಸಹ ನನ್ನ ಗಮನದಲ್ಲಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ರಾಯಬಾಗದ ಅನೀಲ ಶೆಟ್ಟಿ ಎನ್ನುವವರ ವಿರುದ್ಧ ನಾನು ದೂರು ದಾಖಲಿಸಿದ್ದು, ಆ ನಂತರ ರಾಜಿ ಮಾಡಿಕೊಂಡಿದ್ದೇನೆ ಎನ್ನುವುದು ಸರಿ. ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಪಿ.ಎಸ್.ಐ ರವರು, ಸಿ.ಪಿ.ಐ ರವರು, ಡಿ.ವೈ.ಎಸ್.ಪಿ ಮತ್ತು ಎಸ್.ಪಿ ಮತ್ತು ಐ.ಜಿ ರವರ ವಿರುದ್ಧ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯದಲ್ಲಿ ದೂರನ್ನು ಸಲ್ಲಿಸಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಆರೋಪಿತರ ವಿರುದ್ಧ ಮಾತ್ರ ದೂರು ನೀಡಿದ್ದೇನೆ ಎಂದು ಹೇಳಿದ್ದಾರೆ. ಸದರಿ ಅರ್ಜಿಯನ್ನು ನಾನು ಮತ್ತು ನನ್ನ ಹೆಂಡತಿ ಸೇರಿ ನೀಡಿದ್ದೇವೆ ಎನ್ನುವುದು ಸರಿ.

12. ದಿನಾಂಕಃ 14-12-2019 ರಂದು ಬೆಳಗ್ಗೆ 8:00 ಗಂಟೆ ಸುಮಾರಿಗೆ ನಾವು ಮನೆ ಕಟ್ಟುವ ಸಲುವಾಗಿ ಕಲ್ಲನ್ನು ಟ್ರ್ಯಾಕ್ಟರನಲ್ಲಿ ಸುರಿಸುವ ಸಮಯದಲ್ಲಿ ಆರೋಪಿತರು ಬಂದು ನೀವು ಕೊರಮ ಸಮಾಜದವರು ಇಲ್ಲಿ ಮನೆ ಕಟ್ಟಬಾರದು ಎಂದು ಹೇಳಿ ನನ್ನನ್ನು ಹಿಡಿದು ಹೊಡೆಯಲು ಪ್ರಾರಂಭಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆ ಸಮಯದಲ್ಲಿ ಮಲಕಾರಿ ಕೊಟ್ರೆ, ಅವರ ತಂದೆ ಮತ್ತು ಅವರ ತಮ್ಮ ನೀವು ಇಲ್ಲಿ ಮನೆ ಕಟ್ಟಬಾರದು ಎಂದು ಹೇಳಿ, ನಿಮ್ಮ ಕೊರಮ ಸಮಾಜದವರು ವಾಸ ಇರುವ ಕಡೆ ಮನೆ ಕಟ್ಟಿಕೊಳ್ಳಿ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿ ಯಲ್ಲ.

13. ಮಲಕಾರಿ ಕೊಟ್ರೆ, ಅವರ ತಂದೆ ಸಿದ್ದಪ್ಪ ಕೊಟ್ರೆ ಅವರು ಕುರುಪಿಯಿಂದ ನನ್ನ ತಲೆಗೆ ಹೊಡೆದರು, ನಾನು ಬಿಡಿಸಿಕೊಳ್ಳಲು ಕೈಯನ್ನು ಅಡ್ಡಹಿಡಿದಾಗ ನನ್ನ ಕೈಗೂ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ವಿಠ್ಠಲ ಕೊಟ್ರೆ

ಅವರು ಬಂದು ನಮ್ಮ ಮನೆಯ ಹತ್ತಿರ ಇಟ್ಟಿದ್ದ ಸೈಕಲಗೆ ಗಾಳಿ ಹಾಕುವ ಪಂಪನ್ನು ತೆಗೆದುಕೊಂಡು ನನ್ನ ಬೆನ್ನಿಗೆ, ತಲೆಗೆ, ಮೈ ಕೈಗೆ ಹೊಡೆದರು, ನಾನು ಕೆಳಗೆ ಬಿದ್ದ ನಂತರ ಮಲಕಾರಿ ಕೊಟ್ರೆ ಮತ್ತು ಅವರ ತಮ್ಮ ವಿಠ್ಠಲ ಕೊಟ್ರೆ ಕಲ್ಲುಗಳನ್ನು ತೆಗೆದುಕೊಂಡು ನನಗೆ ಜಜ್ಜಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

14. ನನ್ನ ತಲೆಗೆ ಹೆಚ್ಚು ಗಾಯ ಆಗಿದ್ದರಿಂದ ರಕ್ತ ಸುರಿದು ನನಗೆ ಪ್ರಜ್ಞೆ ತಪ್ಪಿತ್ತು, ನನಗೆ ಪ್ರಜ್ಞೆ ಬಂದಾಗ ನಾನು ಮಿರಜ ಆಸ್ಪತ್ರೆಯಲ್ಲಿ ಇದ್ದೇನು, ನನ್ನೊಂದಿಗೆ ನನ್ನ ಹೆಂಡತಿಗೂ ಸಹ ಗಾಯ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ನನ್ನ ಹೆಂಡತಿಯನ್ನು ವಿಚಾರಿಸಿದಾಗ ವಿಠ್ಠಲ ಕೊಟ್ರೆ ಅವರ ಕೈಯಲ್ಲಿದ್ದ ಸೈಕಲ ಪಂಪನ್ನು ಬಾಲಕೃಷ್ಣ ವಡ್ಡರ ಅವರು ತೆಗೆದುಕೊಂಡು ನನಗೂ ಮತ್ತು ನನ್ನ ಹೆಂಡತಿಗೂ ಹೊಡೆದರು ಎಂದು ಹೇಳಿದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಪ್ರವೀಣ ವಡ್ಡರ ಎನ್ನುವವರು ಹಾಗೂ ಸೋಪಿನ ಕಾಕಾ ಎನ್ನುವವರು ನನ್ನ ಹೆಂಡತಿ ತಲೆ ಕೂದಲು ಹಿಡಿದು ಎಳೆದಾಡಿ ಹೊಡೆದರು ಎಂದು ಹೇಳಿದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

15. ಆರೋಪಿತರೆಲ್ಲರೂ ನಮ್ಮನ್ನು ಕೊಲ್ಲುವ ಉದ್ದೇಶದಿಂದಲೇ ನಮ್ಮ ಮನೆಯ ಹತ್ತಿರ ಬಂದು ನಮ್ಮ ಮೇಲೆ ಹಲ್ಲೆ ಮಾಡಿದ್ದಾರೆ ಎಂದು, ನನ್ನ ಹೆಂಡತಿ ಅಂಬ್ಯುಲೆನ್ಸಗೆ ಫೋನ ಮಾಡಿ ಕರೆಸಿಕೊಂಡು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿದ್ದಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

16. ಘಟನೆ ವಿಚಾರವಾಗಿ ನನ್ನ ಹೆಂಡತಿ ದೂರುಕೊಟ್ಟಿದ್ದಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನನ್ನು ಮೊದಲು ರಾಯಬಾಗ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ನಂತರ ಮಿರಜ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು

ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

17. ಪೋಲಿಸರು ರಕ್ತ ಆಗಿದ್ದ ನನ್ನ ಬನಿಯನ್, ಸೈಕಲ ಪಂಪ್, ಕುರುಪಿ ಮತ್ತು ಕಲ್ಲುಗಳನ್ನು ತೆಗೆದುಕೊಂಡು ಹೋದರು, ನಾನು ಅವುಗಳನ್ನು ಗುರುತಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮು.ಮಾ.5 ಬನಿಯನ್ ನನಗೆ ಸೇರಿಲ್ಲ ಎನ್ನುವುದು ಸರಿಯಲ್ಲ. ಘಟನೆಯನ್ನು ಗೋಪಾಲ ಭೀಮಪ್ಪ ಬಿದರಿ ಮತ್ತು ಯಲ್ಲಪ್ಪ ದಿಲೀಪ ಪತ್ರೋಟ್ ಎನ್ನುವವರು ನೋಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

18. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ಆಗಿಲ್ಲ ಎನ್ನುವುದು ಸರಿಯಲ್ಲ. ಈ ಪ್ರಕರಣಕ್ಕೂ, ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹ ನಾನು ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

19. ಮು.ಮಾ.1 ರಿಂದ ಮು.ಮಾ.4 ಸಾಮಾನ್ಯವಾಗಿ ಎಲ್ಲಾ ಮನೆಗಳಲ್ಲೂ ಇರುತ್ತವೆ ಎನ್ನುವುದಕ್ಕೆ ಸಾಕ್ಷಿ ಹೌದು ಎಂದು ಉತ್ತರಿಸಿ ಅವುಗಳನ್ನು ತಂದು ಹಲ್ಲೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ಗೋಪಾಲ ಮತ್ತು ಯಲ್ಲಪ್ಪ ಅವರುಗಳು ಹಲ್ಲೆ ಆಗಿದ್ದನ್ನು ಬಿಡಿಸಿದರು ಎನ್ನುವುದಕ್ಕೆ ಅವರುಗಳು ಹೆದರಿಕೊಂಡು ಹತ್ತಿರ ಬಂದಿರುವುದಿಲ್ಲ ಎಂದು, ಪಕ್ಕದಲ್ಲಿಯೇ ನಿಂತಿದ್ದರು ಎಂದು ಹೇಳಿದ್ದಾರೆ. ಅವರಿಬ್ಬರೂ ನನ್ನೊಂದಿಗೆ ಆಸ್ಪತ್ರೆಗೆ ಬಂದಿರಲಿಲ್ಲ ಎನ್ನುವುದು ಸರಿ.

20. ನಾನು ಹೇಳಿದಂತೆ ಯಾವುದೇ ಘಟನೆ ಆಗಿಲ್ಲ, ಗೋಪಾಲ ಮತ್ತು ಯಲ್ಲಪ್ಪ ಸಹ

ಆ ದಿನ ಸ್ಥಳದಲ್ಲಿ ಇರಲಿಲ್ಲ, ಆ ಕಾರಣ ಅವರು ಜಗಳ ಬಿಡಿಸಿಲ್ಲ ಮತ್ತು ನನ್ನೊಂದಿಗೆ ಆಸ್ಪತ್ರೆಗೆ ಬಂದಿಲ್ಲ ಎನ್ನುವುದು ಸರಿಯಲ್ಲ.

21. ಮು.ಮಾ.1 ರಿಂದ ಮು.ಮಾ.4 ರಿಂದ ನಿಮಗೆ ಯಾವುದೇ ಗಾಯ ಆಗಿಲ್ಲ ಎನ್ನುವುದಕ್ಕೆ ಸಾಕ್ಷಿ ನನಗೆ ಗಾಯ ಆಗಿದೆ ಎಂದು, ತಲೆಯಲ್ಲಿ ಹೊಲಿಗೆ ಹಾಕಿರುವುದನ್ನು ಮತ್ತು ಮೊಣಕೈಗೆ ಹೊಲಿಗೆ ಹಾಕಿದ್ದನ್ನು ತೋರಿಸಿದ್ದಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಬೆಳಗಾವಿ.